ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 1217/2021

ಪಿ. ಡಬ್ಲ್ಯು: 01
ಸಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಟಿ.ಎನ್. ಸಿಂಗ್ರಿನಾಯಕ್ |
| ತಂದೆ/ಪತಿಯ ಹೆಸರು | ಃ | ನರಸಿಂಹ ನಾಯಕ್ |
| ವಯಸ್ಸು | ಃ | 44 ವರ್ಷ |
| ವೃತ್ತಿ | ಃ | ಸಿ.ಹೆಚ್.ಸಿ.347, ಅರಕೆರೆ ಪೋಲೀಸ್ ಠಾಣೆ |
| ವಾಸ | ಃ | ಅರಕೆರೆ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 14.09.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ದಿಃ 05.10.2017 ರಿಂದ ಈವರೆಗೂ ಅರಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 30.04.2021 ರಂದು ನಾನು, ನಮ್ಮ ಪಿ.ಎಸ್.ಸಿ, ಡಬ್ಲ್ಯೂ.ಪಿ.ಸಿ.ಪ್ರಿಯಾಂಕ್ ರವರು ನಮ್ಮ ಇಲಾಖಾ ಜೀಪ್ ಚಾಲಕ ಸಿದ್ದರಾಮನಾಯಕ್ ರವರ ಜೊತೆ ಅರಕೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಸ್ತು ನಲ್ಲಿದ್ದಾಗ ಬೆಳಿಗ್ಗೆ 10.20 ಗಂಟೆಗೆ ನಮ್ಮ ಪಿ.ಎಸ್.ಐ. ರವರಿಗೆ ಮಾಡರಹಳ್ಳಿ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಪೆಟ್ಟಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ನಾವು ಮತ್ತೆ ಪೋಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ ರವರು ದೂರು ದಾಖಲು ಮಾಡಿ 11.15 ಸಮಯಕ್ಕೆ ಠಾಣೆಯನ್ನು ಬಿಟ್ಟು 11.40 ಸಮಯ ಸುಮಾರಿಗೆ ಮಾಡರಹಳ್ಳಿ ಗ್ರಾಮಕ್ಕೆ ಹೋಗಿದ್ದು ಅಲ್ಲಿ ಇದ್ದ ಪೆಟ್ಟಿ ಅಂಗಡಿಯನ್ನು ಪರಿಶೀಲಸಿದಾಗ ಪೆಟ್ಟಿ ಅಂಗಡಿ ಪಕ್ಕದಲ್ಲಿದ್ದ ಒಂದು ರಟ್ಟಿನ ಬಾಕ್ಸ್ ನಲ್ಲಿ 38 90.ಎಂ.ಎಲ್ ಅಳತೆಯ ಮದ್ಯದ ಪೌಚ್ ಗಳು ಇದಿದ್ದು ಕಂಡುಬಂದಿತ್ತು.

ನಾವು ಠಾಣೆಯಿಂದ ಹೊರಟಾಗ ನಮ್ಮ ಜೊತೆ ಗುರು ಮತ್ತು ನಂಜೇಗೌಡ ಎನ್ನುವ ಇಬ್ಬರು ಪಂಚರನ್ನು ಕರೆದುಕೊಂಡು ಹೋಗಿದ್ದೇವು. ನಂತರ ಪಂಚರ ಸಮಕ್ಷಮ ಪಿ.ಎಸ್.ಐ ರವರು ಅಮಾನತ್ತು ಮಹಜರ್ ಕ್ರಮ ಜರುಗಿಸಿ ಮದ್ಯ ತುಂಬಿದ ಪೌಚ್ ಗಳನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಅಲ್ಲಿದ್ದ ವ್ಯಕ್ತಿಯನ್ನು ಮದ್ಯ ತುಂಬಿದ್ದ ಪೌಚ್ ಗಳನ್ನು ಮಾರಾಟ ಮಾಡಲು ಪರವಾನಿಗೆ ಇದ್ದ ಬಗ್ಗೆ ವಿಚಾರಿಸಲಾಗಿ ಆತ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ನಂತರ ಆ

ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರನ್ನು ಕುಮಾರ್ ಬಿನ್ ನಟರಾಜು, ಮಾಡರಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾನೆ. ಮಹಜರ್ ಅನ್ನು ಬೆಳಿಗ್ಗೆ 11.45-12.45 ವರೆಗೆ ಮಾಡಲಾಗಿರುತ್ತದೆ. ನಂತರ ಮಹಜರ್ ಕಾಲದಲ್ಲಿ ಮದ್ಯ ತುಂಬಿದ ಪೌಚ್ ಗಳನ್ನು ಒಂದು ಬಿಳಿಯ ಬಟ್ಟೆಗೆ ಹಾಕಿ ಅದನ್ನು ಎ ಎಂಬ ಅಕ್ಷರ ದಿಂದ ಪಂಚರ ಸಮಕ್ಷಮ ಸೀಲ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಗಿದೆ. ನಂತರ ಮಧ್ಯಾಹ್ನ 01.00 ಸಮಯದಲ್ಲಿ ಆರೋಪಿ ಮತ್ತು ಅಮಾನತ್ತು ಪಡಿಸಿಕೊಂಡಿದಿದ್ದ ಮದ್ಯ ತುಂಬಿದ್ದ ಬಾಟಲಿಗಳನ್ನು ತೆಗೆದುಕೊಂಡು ಠಾಣೆಗೆ ಬಂದಿರುತ್ತೇವೆ.

ಮಹಜರ್ ಕಾಲದಲ್ಲಿ ನಮ್ಮ ಪಿ.ಎಸ್.ಐ ರವರು ವಶಪಡಿಸಿಕೊಂಡಿದ್ದ ಮದ್ಯ ತುಂಬಿದ್ದ ಪೌಚ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಪೌಚ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.1 ಎಂದು ಗುರುತಿಸಲಾಯಿತು. ನಾವು ದಾಳಿ ಮಾಡಿ ಹಿಡಿದಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ.ಸಿ.ಆರ್.ಎಸ್. ವಕೀಲರಿಂದ</u>**

ನಾವು ಮಾಹಿತಿ ಬಂದಾಗ ಅರಕೆರೆಯಲ್ಲಿನ ಬಳ್ಳೇಕೆರೆ ಸರ್ಕಲ್ ನಲ್ಲಿ ಇದ್ದೇವು. ಸದರಿ ಸ್ಥಳದಿಂದ ನಮ್ಮ ಪೋಲೀಸ್ ಠಾಣೆ ಸುಮಾರು ಒಂದೂವರೆ ಕಿ.ಮಿ. ಅಂತರದಲ್ಲಿದೆ. ಮಾಡರಹಳ್ಳಿಗೂ ನಾವು ಇದ್ದ ಸ್ಥಳಕ್ಕೂ ಸುಮಾರು 4-5 ಕಿ.ಮಿ ಅಂತರವಿತ್ತು. ಪೋಲೀಸ್ ಠಾಣೆಗೆ ವಾಪಸ್ಸು ಬಂದ ನಂತರ ನಾವು ಸುಮಾರು ಅರ್ಧ ಗಂಟೆ ಠಾಣೆಯಲ್ಲಿದ್ದೇವು. ಪೋಲೀಸ್ ಠಾಣೆಯಿಂದ ಮಾಡರಹಳ್ಳಿ ಸುಮಾರು 4-5 ಕಿ.ಮಿ. ಅಂತರದಲ್ಲಿದೆ. ಪೋಲೀಸ್ ಠಾಣೆಯಿಂದ ಪಿ.ಎಸ್.ಐ. ರವರ ಜೊತೆ, ಇಬ್ಬರು ಪಂಚರು, ನಾನು, ನಮ್ಮ ಸಿಬ್ಬಂದಿ ಪ್ರಿಯಾಂಕ ಹಾಗೂ ನಮ್ಮ ಇಲಾಖಾ ಜೀಪ್ ಚಾಲಕ ಹೋದೆವು.

ಪಂಚರು ಆ ಸಮಯದಲ್ಲಿ ಪೋಲೀಸ್ ಠಾಣೆಗೆ ಬೇರೆ ವಿಚಾರಕ್ಕೆ ಬಂದಿದ್ದು ನಾವು ಅವರನ್ನು ಕರೆದುಕೊಂಡು ಹೋಗಿರುತ್ತೇವೆ.

ಮಾಡರಹಳ್ಳಿಗೆ ಹೋದಾಗ ನಾವು ನೇರವಾಗಿ ಆರೋಪಿಯ ಪೆಟ್ಟಿ ಅಂಗಡಿ ಹತ್ತಿರ ಹೋಗಿರುತ್ತೇವೆ. ಆರೋಪಿ ಅಂಗಡಿ ಊರ ಒಳಗಡೆ ಇರುತ್ತದೆ. ಪೆಟ್ಟಿ ಅಂಗಡಿ ಪಕ್ಕ ಗ್ರಾಮಸ್ಥರ ವಾಸದ ಮನೆಗಳು ಹಾಗೂ ಇತರೇ ಅಂಗಡಿಗಳು ಸಹ ಇದ್ದವು. ನಾವು ಅಂಗಡಿ ಹತ್ತಿರ ಹೋದಾಗ ಆರೋಪಿ ಜೊತೆಗೆ ಇನ್ನೂ ಇಬ್ಬರು ಇದ್ದರು. ರಟ್ಟಿನ ಬಾಕ್ಸ್ ಅಂಗಡಿಗೆ

ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿಗೆ ಇತ್ತು. ಅಲ್ಲಿದ್ದ ಅಂಗಡಿ ಪೆಟ್ಟಿ ಅಂಗಡಿಯಾಗಿತ್ತು. ಸದರಿ ಅಂಗಡಿಯಲ್ಲಿ ಬೇರೆ ವಸ್ತುಗಳನ್ನು ಸಹ ವ್ಯಾಪಾರಕ್ಕೆ ಇಟ್ಟಿದ್ದರು.

ಅಂಗಡಿ ಪಕ್ಕದಲ್ಲಿದ್ದ ರಟ್ಟಿನ ಬಾಕ್ಸ್ ಖಾಕಿ ಬಣ್ಣದ್ದಾಗಿತ್ತು ಅದರ ಮೇಲೆ ಮುದ್ರೆ ಇದ್ದ ಬಗ್ಗೆ ಗಮನಿಸಿಲ್ಲ. ಮು.ಮಾಲು.1 ಅನ್ನು ಪ್ಯಾಕ್ ಮಾಡುವ ಮುಂಚೆ ಅಮಾನತ್ತು ಮಹಜರ್ ಮಾಡುವ ಮುಂಚೆ ಅದನ್ನು ಪರಿಶೀಲನೆ ಮಾಡಿದ್ದೇನೆ. ಅಮಾನತ್ತು ಮಹಜರ್ ಸಮಯದಲ್ಲಿ ವಶಪಡಿಸಿಕೊಂಡಿದ್ದ ಮದ್ಯದ ಪೌಚ್ ಗಳು ಯಾವ ದಿನಾಂಕದಂದು ತಯಾರಾಗಿದ್ದವು ಮತ್ತು ಅದರ Expiry date ಯಾವುದು ಎನ್ನುವ ಬಗ್ಗೆ ನಾನು ಗಮನಿಸಿಲ್ಲ. ಮಹಜರ್ ಅನ್ನು ನಮ್ಮ ಸಿಬ್ಬಂದಿಯಾದ ಮಲ್ಲಪ್ಪ ಎನ್ನುವವರ ಕಡೆಯಿಂದ ಬರೆಸಲಾಗಿದೆ.

ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಘಟನೆ ಸಂಬಂಧ ಪಡೆದಿದ್ದಾರೆ. ಆರೋಪಿ ತನ್ನ ಪೆಟ್ಟಿ ಅಂಗಡಿಯಲ್ಲಿ ಮದ್ಯ ತುಂಬಿದ ಪೌಚ್ ಗಳನ್ನು ಮಾರಾಟ ಮಾಡುತ್ತಿರಲಿಲ್ಲ ಮತ್ತು ನಾವು ಆತನ ಪೆಟ್ಟಿ ಅಂಗಡಿ ಮೇಲೆ ನಾನು ಹೇಳಿದ ದಿನಾಂಕದಂದು ದಾಳಿ ಮಾಡಿಲ್ಲ ಮತ್ತು ಮು.ಮಾಲು.1 ಅನ್ನು ಆತನ ಪೆಟ್ಟಿ ಅಂಗಡಿಯಿಂದ ವಶಪಡಿಸಿಕೊಂಡಿಲ್ಲವೆಂದರೆ ಸುಳ್ಳು. ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ನೊಂದಾಯಿಸಲಾದ ಪ್ರ.ವ.ವರದಿಗೆ ಅನುಗುಣವಾಗಿ ಮೇಲಾಧಿಕಾರಿಯವರ ಸೂಚನೆ ಮೇರೆಗೆ ಸುಳ್ಳು ಸಾಕ್ಷ್ಯವನ್ನು ಆರೋಪಿ ವಿರುದ್ದ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.